

# 'ಬರ್ತ್‌ಡೇ ಬಂಪ್ಸ್' ಹಿಂಸಾವಿನೋದ

ಹುಟ್ಟುಹಬ್ಬದ ಹೆಸರಿನಲ್ಲಿ ದೀಪ ಬೆಳಗುವುದು, ಸಿಹಿ ಹಂಚುವುದು ರೂಢಿ. ಬರ್ತ್‌ಡೇ ಸಂಭ್ರಮದಲ್ಲಿರುವ ವ್ಯಕ್ತಿಯನ್ನು ದೈಹಿಕವಾಗಿ ಹಿಂಸಿಸುವ ಮೂಲಕ ಸಂಭ್ರಮಿಸುವ ಹೊಸ ಆಚರಣೆ ನಿಧಾನಕ್ಕೆ ಚಾಲ್ತಿಗೆ ಬರುತ್ತಿದೆ.

■ ಸಂಜೀವ್ ಜಗ್ಲಿ ಮಾನ್ವಿ

ಧಾರವಾಡದಲ್ಲಿ ಓದುತ್ತಿದ್ದ ತಮ್ಮನ ಹುಟ್ಟುಹಬ್ಬದ ದಿನ ಅವನಿಗೆ ಶುಭಕೋರಲು ಮಧ್ಯರಾತ್ರಿ ಕರೆ ಮಾಡಿದ್ದೆ. ಆದರೆ ಅವನು ಕರೆ ಸ್ವೀಕರಿಸಿರಲಿಲ್ಲ.ಮಾರನೇ ದಿನ ಮತ್ತೆ ವಿಡಿಯೊ ಕರೆ ಮಾಡಿದೆ. ಆ ಬದಿಯಲ್ಲಿದ್ದ ತಮ್ಮನನ್ನು ನೋಡಿ ಗಾಬರಿಯಾಯಿತು. ಅವನ ಮೈತುಂಬಾ ಬಾಸುಂಡೆಗಳು!

ಸಹಪಾಠಿಗಳೊಂದಿಗೆ ಜಗಳ ಮಾಡಿಕೊಂಡು ಒದೆ ತಿಂದನಾ? ಯಾವುದಾದರೂ ಬೇಡದ ಕೆಲಸದಲ್ಲಿ ತೊಡಗಿ ಈ ಸ್ಥಿತಿ ಬಂತಾ? ಸಾವರಿಸಿಕೊಂಡು ವಿಚಾರಿಸಿದಾಗ ತಿಳಿದದ್ದು ಹುಟ್ಟುಹಬ್ಬದ ಹೆಸರಿನಲ್ಲಿ ನಡೆದ ವಿಚಿತ್ರ ಸಂಭ್ರಮ. ರಾತ್ರಿ ಬರ್ತ್‌ಡೇ ಆಚರಿಸಿದ್ದ ಗೆಳೆಯರು ಕೋಲಿನಿಂದ ಹಿಗ್ಗಾಮುಗ್ಗಾ ಥಳಿಸಿದ್ದರು. ಅವರ ಪಾಲಿಗೆ ಹೀಗೆ ಥಳಿಸುವುದೇ ಹುಟ್ಟುಹಬ್ಬದ ಆಚರಣೆ–ಸಂಭ್ರಮ. ಆ ಸಂಭ್ರಮಕ್ಕೆ 'ಬರ್ತ್‌ಡೇ ಬಂಪ್ಸ್' ಎಂದು ಹೆಸರು. ಎಂಥದಿದು ಅಮಾನವೀಯ ಆಚರಣೆ ಅನ್ನಿಸಿತು.

'ಅಣ್ಣ, ಬರ್ತ್‌ಡೇಗೆ ಹೀಗೆಲ್ಲ ಮಾಡುವುದು ಹೊಸ ಟ್ರೆಂಡ್. ಇಲ್ಲೆಲ್ಲ ಇಂತಹದ್ದು ಕಾಮನ್. ಈ ಬಗ್ಗೆ ನೀನು ತಲೆ ಕೆಡಿಸಿಕೊಳ್ಳಬೇಡ' ಎಂದು ತಮ್ಮ ಏನೂ ನಡೆದೇ ಇಲ್ಲವೆನ್ನುವಂತೆ ನಿರಾಳವಾಗಿ ಹೇಳಿದ.

ಎರಡು ದಿನಗಳ ನಂತರ ಕರೆ ಮಾಡಿದ ತಮ್ಮ, 'ವಾಟ್ಸ್‌ಆಪ್‌ನಲ್ಲಿ ಒಂದು ವಿಡಿಯೊ ಹಾಕಿದ್ದೀನಿ ನೋಡು' ಎಂದ. ತಕ್ಷಣ ಮೊಬೈಲ್ ಓಪನ್ ಮಾಡಿ ನೋಡಿದೆ. ಅಲ್ಲಿದ್ದುದು ಬರ್ತ್‌ಡೇ ಬಂಪ್ಸ್ ದೃಶ್ಯಾವಳಿಯ ಹಾವಳಿ. ನಮ್ಮಲ್ಲಿ ಹುಟ್ಟುಹಬ್ಬದ ಆಚರಣೆಯೆಂದರೆ, ದೀಪ ಬೆಳಗುವುದು ಇಲ್ಲವೇ ಕೇಕ್ ಕತ್ತರಿಸಿ ಬಾಯಿ ಸಿಹಿ ಮಾಡಿಕೊಳ್ಳುವುದು. ಆದರೆ, ಇಲ್ಲಿ ಹುಟ್ಟುಹಬ್ಬದ ಸಂಭ್ರಮದಲ್ಲಿದ್ದ ಹುಡುಗನನ್ನು ಹಗ್ಗದಿಂದ ಕಟ್ಟಿ ಹಾಕಿ ಹೊಡೆಯುತ್ತಿದ್ದಾರೆ. ಅಳುವುದೋ ನಗುವುದೋ ತಿಳಿಯಲಿಲ್ಲ.

'ಬರ್ತ್ ಡೇ' ಬಂಪ್ಸ್ ಬಗ್ಗೆ ಅಂತರ್ಜಾಲದಲ್ಲಿ ಮಾಹಿತಿ ಹುಡುಕಿದರೆ ಸ್ವಾರಸ್ಯಕರ ಸಂಗತಿಗಳು ಎದುರಾಗುತ್ತವೆ. ಯುಟ್ಯೂಬ್‌ನಲ್ಲಂತೂ ಸಾಲು ಸಾಲು ದೃಶ್ಯಾವಳಿಗಳೇ ಸಿಗುತ್ತವೆ. ಮುಖಕ್ಕೆ ಮೊಟ್ಟೆ, ಟೊಮೆಟೊ, ಬಣ್ಣ ಬಳಿಯುವುದು; ಕೈಕಾಲು ಹಿಡಿದು ನೆಲಕ್ಕೆ ಹೊಡೆಯುವುದು; ಗುಂಪಿನ ಮಧ್ಯೆ ಹಾಕಿಕೊಂಡು ಸಿನಿಮಾ ಸ್ಟೈಲ್‌ನಲ್ಲಿ ಒದೆಯುವುದು – ಇವೆಲ್ಲ ಹುಟ್ಟುಹಬ್ಬದ ಆಚರಣೆಯ ವಿಧಾನಗಳಾಗಿವೆ. ಇಂತಹ ಬೆಳವಣಿಗೆ ವಿಶ್ವವಿದ್ಯಾಲಯಗಳಲ್ಲಿ ಹೆಚ್ಚಾಗಿ ನಡೆಯುತ್ತಿದೆ. ಅಲ್ಲಿ ಕಲಿತದ್ದನ್ನು ಯುವಕರು ತಮ್ಮ ಊರಿನ ಸ್ನೇಹಿತರಿಗೂ ಹಬ್ಬಿಸುತ್ತಿದ್ದಾರೆ. ಕ್ಯಾಂಪಸ್‌ನಲ್ಲಿ ಬರ್ತ್‌ಡೇ ಬಂಪ್ಸ್ ಆಚರಣೆ ಮಾಡದಂತೆ ಮುಂಬಯಿಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಐಐಟಿ) ನೋಟೀಸ್ ಜಾರಿ ಮಾಡಿದ್ದ ಸುದ್ದಿಯನ್ನೂ ಇಲ್ಲಿ ನೆನಪಿಸಿಕೊಳ್ಳಬಹುದು.

ಅಮೆರಿಕ, ಇಂಗ್ಲೆಂಡ್‌ಗಳಲ್ಲಿ ಚಾಲ್ತಿಯಲ್ಲಿದ್ದ 'ಬರ್ತ್‌ಡೇ ಬಂಪ್ಸ್' ಭಾರತದಲ್ಲೂ ನಿಧಾನಕ್ಕೆ ಬೇರುಬಿಡುತ್ತಿದೆ. ಸ್ನೇಹದಿಂದ ಹುಟ್ಟಹಬ್ಬ ಮಾಡುವ ಯುವಕರು ಆಚರಣೆಯ ಸಂದರ್ಭದಲ್ಲಿ ಹೊಡೆಯುವುದು, ದ್ವೇಷವಾಗಿ ಬದಲಾಗುವುದೂ ಇದೆ. ಸಂಭ್ರಮ ಮಿತಿಮೀರಿದಾಗ ಬಿದ್ದ ಹೊಡೆತಗಳಿಂದ ದೇಹ–ಮನಸ್ಸುಗಳು ಗಾಸಿಗೊಂಡ ಘಟನೆಗಳೂ ಸಾಕಷ್ಟಿವೆ.

ಯುಟ್ಯೂಬ್ ನೋಡಿ ಹುಟ್ಟುಹಬ್ಬ ಸೆಲೆಬ್ರೇಟ್ ಮಾಡುವ ಯುವಪೀಳಿಗೆ ನಮ್ಮ ನಡುವೆಯಿದೆ. ಅವರ ಮೂಲಕವೇ ಹೊಸ ಹೊಸ ವಿದೇಶಿ ಆಚರರಣೆಗಳು ನಮ್ಮ ನೆಲದ ಆಚರಣೆಗಳಾಗಿ ಮನ್ನಣೆ ಪಡೆಯುತ್ತಿವೆ. ಸಂಬಂಧಗಳನ್ನು ಬೆಸೆಯುವ ಆಚರಣೆಗಳಾದರೆ ಸಂಭ್ರಮಿಸೋಣ. ಆದರೆ, ದೈಹಿಕವಾಗಿ ಮಾನಸಿಕವಾಗಿ ಹಿಂಸಿಸುವ ಆಚರಣೆಗೆ ಏನನನ್ನುವುದು? ■